ಟೈ ಕಳಚಲಿಲ್ಲ, ಮುಂಡಾಸನ್ನು ಕಳಚಲಿಲ್ಲ... ಯಾರ ಕ್ಷೇಮಸಮಾಚಾರವನ್ನೂ ವಿಚಾರಿಸಲಿಲ್ಲ... ನಗುತ್ತಾ ಬಾ ಅವರನ್ನು ನೋಡುತ್ತಾ ಕೇಳಿದರು, 'ಕೇಳ್ತಿದ್ದೀಯಲ್ಲ?'

'ಬಿಳಿ ಸರ್ಕಾರ ನಿಮ್ಮ ಎಲ್ಲಾ ಶರತ್ತುಗಳನ್ನು ಒಪ್ಪಿಕೊಂಡಂತಿದೆಯಲ್ಲ? ಇಷ್ಟು ಖುಷಿಯಿಂದ ಕೇಳುತ್ತಿದ್ದೀರಲ್ಲ?' ಬಾ ಸಹ ಪ್ರಶ್ನಿಸಿದರು.

'ನೋಡು, ಬಿಳಿ ಸರ್ಕಾರದ ಉತ್ತರಕ್ಕಿಂತ ದೊಡ್ಡ ಉತ್ತರವನ್ನು ನಮ್ಮ ಹೀರಾಲಾಲ ಕೊಟ್ಟಿದ್ದಾನೆ. ಗುಲಾಬ ಸೊಸೆಯ ಕಾಲುಗಳು ಭಾರವಾಗಿವೆ. ನೋಡು, ದೇಶದಿಂದ ಬೀಗರ ಈ ಪತ್ರ ಬಂದಿದೆ.' ಎನ್ನುತ್ತಾ ಬಾಪೂ ತಮ್ಮ ಕೋಟಿನ ಜೇಬಿನಿಂದ ಕವರನ್ನು ತೆಗೆದು ಎದುರಿಗಿಟ್ಟರು. ಆಗ ಹರಿಲಾಲ ಅಲ್ಲಿಯೇ ಇದ್ದ. ಬಾಪೂ ಅವನನ್ನು ನೋಡುತ್ತಾ ಹೇಳಿದರು, 'ಈಗ ನಿನ್ನ ಜವಾಬ್ದಾರಿ ಸಹ ಹೆಚ್ಚುತ್ತಿದೆ, ಹರಿ!'

ಬಾ ಅವರಿಗೆ ತುಂಬಾ ಸಂತಸವಾಯಿತು. ಅವರ ತುಟಿಗಳಲ್ಲಿ ಮುಗುಳ್ನಗೆ ಮೂಡಿತು. ಮಗನನ್ನು ನೋಡಿ ಧನ್ಯತೆಯ ಭಾವನೆಯನ್ನು ಮನಗಂಡರು. ಹರಿಲಾಲ ತನಗೆ ಏನೂ ತಿಳಿದಿಲ್ಲವೆಂಬಂತೆ ತಲೆ ತಗ್ಗಿಸಿ ನೆಲವನ್ನು ನೋಡುತ್ತಿದ್ದ. 'ನೋಡು...' ಬಾಪೂ ಹೇಳಿದರು, 'ಸೊಸೆಯ ಮಡಿಲು ತುಂಬುವ ಶಾಸ್ತ್ರ ಮತ್ತು ಮಗುವಿನ ಜನನ ನಮ್ಮ ಫೀನಿಕ್ಸ್ ಆಶ್ರಮದಲ್ಲಿಯೇ ನಡೆಯಬೇಕು...ನೀನು ಅಜ್ಜಿಯಾಗುತ್ತಿದ್ದೀಯ. ಅಜ್ಜಿಯ ಮೊಮ್ಮಗ ಆಶ್ರಮವಾಸಿಯೇ ಆಗಬೇಕು, ಇದಕ್ಕಿಂತ ಶುಭವಾದದ್ದು ಬೇರೇನಿದೆ?'

'ನನ್ನ ಗುಲಾಬಳ ಗರ್ಭದಲ್ಲಿ ಮೊದಲ ಮಗು ಹೆಣ್ಣೇ ಆಗಬೇಕೆಂಬುದು ನನ್ನಾಸೆಯಾಗಿದೆ,' ಬಾ ಉತ್ಸಾಹದಿಂದ ಹೇಳಿದರು, 'ನಮ್ಮ ಮನೆಯಲ್ಲಿ ಹಾಗಂತ ಲಕ್ಷ್ಮೀ ಇಲ್ಲ... ಅದಕ್ಕೇ ನನಗೆ ಲಕ್ಷ್ಮೀ ಬರುವುದು ತುಂಬಾ ಇಷ್ಟವಾಗುವುದು.'

'ಸರಿಸರಿ...' ಬಾಪೂ ಹೇಳಿದರು, 'ಆದರೆ ಅದಕ್ಕಾಗಿ ನಾವು ಸೊಸೆಯನ್ನು ಇಲ್ಲಿಗೇ ಕರೆಸಿಕೊಳ್ಳೋಣ. ಒಂದು ಒಳ್ಳೆಯ ದಿನ ನೋಡಿ ಸೊಸೆಯನ್ನು ಇಲ್ಲಿಗೆ ಕಳುಹಿಸುವಂತೆ ಅಣ್ಣ ಮತ್ತು ಬೀಗರಿಗೆ ಇಂದೇ ಪತ್ರವನ್ನು ಬರೆಯುತ್ತೇನೆ.'

ಹರಿಲಾಲ ಅಲ್ಲಿಯೇ ನಿಂತು ಇವರ ಮಾತುಕತೆಯನ್ನು ಕೇಳುತ್ತಿದ್ದ.

ಬಾಪೂ ಅವರ ಈ ಅಂತಿಮ ನಿರ್ಣಯದೊಂದಿಗೆ ಹರಿಲಾಲನ ಮನಸ್ಸಿನಲ್ಲಿ ಶೀತಲ ಮತ್ತು ಮೃದು ಅಲೆಯೊಂದು ಎದ್ದಿತು. ನನ್ನ ಪ್ರೀತಿಯ ಗುಲಾಬ ಇಲ್ಲಿಗೇ ಬರುವಳು, ತನ್ನೊಂದಿಗೆ, ಎಲ್ಲರೊಂದಿಗೆ ಇನ್ನು ಇಲ್ಲಿಯೇ ಇರುವಳು...ತನಗೆ ಹೆಂಡತಿಯ ಜೊತೆಯೂ ಸಿಗುವುದು...

ಹರಿಲಾಲ, ಬಾ ಮತ್ತು ಬಾಪೂ ಅವರನ್ನು ನೋಡದೆ ಹೊರಗೆ ಹೊರಟು ಹೋದ. ನಿತ್ಯ ಗಡಿಯಾರದ ಮುಳ್ಳುಗಳಂತೆ ನಡೆಯುವ ಆಶ್ರಮದ ಜೀವನದಲ್ಲಿ ಇಂದು ಒಂದು ದೊಡ್ಡ ಪರಿವರ್ತನೆಯೇ ಬಂದಿತ್ತು. ಅದೆಷ್ಟೋ ತಿಂಗಳುಗಳಿಂದ ಹೋರಾಟದ ಭಾರ ತಲೆಯ ಮೇಲಿರುವ ಅನುಭವವಾಗುತ್ತಿತ್ತು, ಆದರೆ ಇಂದು ಆ ಭಾರ ಹಗುರವಾಗಿದೆ ಎಂದು ಅನ್ನಿಸಿತು. ಮಕ್ಕಳು ಆಲೂಚಾ ಮತ್ತು ಕಿತ್ತಳೆ ಹಣ್ಣಿನ ಸ್ವಾದವನ್ನು ಸವಿಯುತ್ತಾ ಝರಿಯ ನೀರಿನಲ್ಲಿ ಕುಣಿದು ಕುಪ್ಪಳಿಸುತ್ತಿದ್ದರು. ಗಾಳಿ ವೇಗವಾಗಿ ಬೀಸುತ್ತಿತ್ತು. ಎಲ್ಲರೂ ಇದನ್ನು ಗಮನಿಸದೆ ಆಶ್ರಮದ ಸಡಗರದಲ್ಲಿ ಭಾಗವಹಿಸುವರು. ಬಾಪೂ ಇನ್ನೂ ಬಂದಿರಲಿಲ್ಲ. ಭರವಸೆ ಸುಳ್ಳಾಗುವಂತಿತ್ತು. ಮಧ್ಯಾಹ್ನ ಬರುವ ಬಸ್ಸಿಗೆ ಬಾಪೂ ಬಂದೇ ಬರುತ್ತಾರೆ ಎಂದು ಎಲ್ಲರೂ ನಿರೀಕ್ಷಿಸುತ್ತಿದ್ದರು.

ಆದರೆ ಬಾಪೂ ಅವರ ಆಗಮನ ಈ ಸಡಗರಕ್ಕೆ ಸಂಬಂಧಿಸಿರಲಿಲ್ಲ. ಗುಲಾಬ ಸೊಸೆಯ ಮಡಿಲು ತುಂಬುವ ಶಾಸ್ತ್ರ ಪ್ರಮುಖವಾಗಿತ್ತು. ಬಾಪೂ ಅವರ ಕರೆಗೆ ಓಗೊಟ್ಟು ಗುಲಾಬ ಆಫ್ರಿಕಾಕ್ಕೆ ಬಂದಿದ್ದಳು; ಇಂದು ಆಶ್ರಮವಾಸಿಗಳು ಪರಂಪರಾಗತ ವಿಧಿ ವಿಧಾನಗಳಿಂದ ಈ ಮಡಿಲು ತುಂಬುವ ಶಾಸ್ತ್ರದಲ್ಲಿ ಭಾಗವಹಿಸಲು ಉತ್ಸಾಹದಿಂದ ಬಂದಿದ್ದರು. ಗುಲಾಬಳ ಅಂಗೈಗೆ ರಕ್ಷಾಬಂಧನವನ್ನು ಕಟ್ಟಲಾಯಿತು. ತಲೆಗೆ ಮುಖುಟವಿಟ್ಟು, ರಾಂದಲ ಮಾತೆಯನ್ನು ಪ್ರತಿಷ್ಠಾಪಿಸಲಾಗಿತ್ತು. ಹೊಳೆಯುವ ಹಿತ್ತಾಳೆ ಕೊಡದಲ್ಲಿ ನೀರು ತುಂಬಿ ಸೊಸೆಯ ಸ್ವಾಗತಕ್ಕೆ ಸಿದ್ಧತೆಗಳು ನಡೆದಿದ್ದವು. ಆಶ್ರಮದ ಮಹಿಳೆಯೊಬ್ಬಳು ಅವಳ ಒಂದೊಂದು ಹೆಜ್ಜೆಗೆ ಅಡಿಕೆಗಳನ್ನಿಡಲು ಅಡಿಕೆಯ ತಟ್ಟೆಯನ್ನು ಹಿಡಿದು ನಿಂತಿದ್ದಳು.

ನಿತ್ಯ ಆಶ್ರಮದಲ್ಲಿ ತಯಾರಾಗುವ ಸರಳ ಮತ್ತು ಎಣ್ಣೆಮಸಾಲೆ ರಹಿತ, ಸಪ್ಪೆ ಭೋಜನಕ್ಕೆ ಬದಲು ಇಂದು ಅಡುಗೆ ಮನೆಯಿಂದ ಪಾಕದ ಸುಗಂಧ ಸೂಸಿ ಬರುತ್ತಿತ್ತು. ಬಾಪೂ ಅವರಿಗೆ ಹೋಳಿಗೆ ಮತ್ತು ರುಚಿಯಾದ ಭೋಜನ ತುಂಬಾ ಇಷ್ಟ ಎಂಬುದು ಎಲ್ಲರಿಗೂ ತಿಳಿದಿತ್ತು. ಇಂದು ಬಾಪೂ ತುಂಬಾ ದಿನಗಳ ನಂತರ ಆಶ್ರಮಕ್ಕೆ ಮರಳಿ ಬರುವವರಿದ್ದರು ಎಂದಲ್ಲ, ಪ್ರತಿಯಾಗಿ ಮಡಿಲು ತುಂಬುವ ಶಾಸ್ತ್ರದ ಸಂದರ್ಭದಲ್ಲಿ ಎಲ್ಲರಿಗೂ ಸಿಹಿಯನ್ನು ತಿನ್ನಿಸಬೇಕಿತ್ತು. ಹೀಗಾಗಿ ಬಾ ಇಂದು ಎಲ್ಲಾ ನಿಯಮಗಳಿಂದ ಮುಕ್ತರಾಗಿ ಹೋಳಿಗೆ, ಖಾರದ ಢೋಕಲಾ ಮತ್ತು ಮೆಂತ್ಯದ ಪಕೋಡಾ ಮಾಡಿಸುವ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಿದ್ದರು.

ಹದಿನಾರು ಹದಿನೇಳರ ಗುಲಾಬ ಈ ಅಪರಿಚಿತ ದೇಶದಲ್ಲಿ, ಈ ಎಲ್ಲಾ ಅಪರಿಚಿತರ ನಡುವೆ ಬಂದಿರುತ್ತಾ ಹೆಚ್ಚು ದಿನಗಳು ಕಳೆದಿರಲಿಲ್ಲ. ಆಫ್ರಿಕಾದಲ್ಲಿ ನಿನ್ನ ಮಾವ ದೊಡ್ಡ ಹೋರಾಟವನ್ನು ಮಾಡುತ್ತಿದ್ದಾರೆ ಎಂದು ಅವಳ ತಂದೆ ರಾಜಕೋಟದಲ್ಲಿ ಹೇಳಿದ್ದರು.

ನೂರಾರು ಭಾರತೀಯರು ಬಾಪೂ ಅವರ ಪ್ರತಿಯೊಂದು ಶಬ್ದವನ್ನು, ಆದೇಶವನ್ನು ಶಿರಸಾ ಪಾಲಿಸುತ್ತಾ ಶತ್ರುವನ್ನು ಎದುರಿಸುತ್ತಿರುವ ಬಗ್ಗೆ ಹರಿಲಾಲನ ಪತ್ರಗಳನ್ನು ಓದಿ ಅವಳು ಆಪಾದಮಸ್ತಕ ಕಂಪಿಸಿದ್ದಳು. ಮಾವ ಬಾಪೂ ಅವರು ತನ್ನ ತಂದೆಗೆ, ಒಳ್ಳೆಯ ಜೊತೆಯೊಂದಿಗೆ, ಸಮಯ ನೋಡಿ ಗುಲಾಬಳನ್ನು ಕಳುಹಿಸಿಕೊಡುವಂತೆ ಪತ್ರ ಬರೆದಿದ್ದನ್ನು ನೋಡಿ ಅವಳು ಮೊದಲು ತುಂಬಾ ಹೆದರಿದ್ದಳು.

ಆಫ್ರಿಕಾ ದೇಶ ಹೇಗಿರಬಹುದು? ಶಾಲೆಯ ಪುಸ್ತಕಗಳಲ್ಲಿ ಅವಳು ಕಾಠಿಯಾವಾಡ್ ಮತ್ತು ಗುಜರಾತ್ ಮುಂತಾದ ಊರುಗಳ ಬಗ್ಗೆ ಓದಿದ್ದಳು. ಬಿಳಿಯ ಅಧಿಕಾರಿಗಳು ಸಾವಿರಾರು ಮೈಲುಗಳ ದೂರದಿಂದ ಬಂದು ಹೋರಾಟ ಮತ್ತು ಜಗಳವಾಡುತ್ತಿದ್ದ ಕಾಠಿಯಾವಾಡವನ್ನು ಶಾಂತಗೊಳಿಸಿ, ಸುಂದರ ಊರನ್ನಾಗಿ ಮಾಡಿರುವ ಬಗ್ಗೆ ಓದಿದ್ದಳು. ತಮ್ಮ ದೇಶದಿಂದ ಸಾವಿರಾರು ಮೈಲಿಗಳ ದೂರಕ್ಕೆ ಬಂದು ಕಾಠಿಯಾವಾಡದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡಿದ ಈ ಬಿಳಿಯರು, ಆಫ್ರಿಕಾದಲ್ಲಿ ಬಾಪು ಅವರಂಥ ಸರಳ ಮತ್ತು ಪ್ರಾಮಾಣಿಕ ವ್ಯಕ್ತಿಯೊಂದಿಗೆ ಹೇಗೆ ಅಮಾನುಷವಾಗಿ ಹೋರಾಡುತ್ತಿದ್ದಾರೆ ಎಂಬುದು ಗುಲಾಬಳಿಗೆ ಅರ್ಥವಾಗುತ್ತಿರಲಿಲ್ಲ. ಬಾಪೂ ಯಾರೊಂದಿಗೂ ಜಗಳ ಮಾಡುವ ವ್ಯಕ್ತಿಯಲ್ಲ, ಹೀಗಿರುವಾಗ ಈ ಬಿಳಿಯರು

ಗುಲಾಬ ಆಗ ಭೂಗೋಳದ ಪುಸ್ತಕವೊಂದನ್ನು ನೋಡಿ, ಆಫ್ರಿಕಾ ಯಾವ ದಿಕ್ಕಿನಲ್ಲಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸಿದ್ದಳು. ಮುಂಬೈ ಮಡಿಲಿನಿಂದ ಹೊರಡುವ ಹಡಗು ಇಪ್ಪತ್ತು ದಿನಗಳ ಕಾಲ ಹಗಲುರಾತ್ರಿ ಸಂಚರಿಸಿ, ಕಡೆಯಲ್ಲಿ ಆಫ್ರಿಕಾ ತೀರಕ್ಕೆ ಹೋಗುತ್ತದೆ ಎಂದು ತಂದೆಯವರು ಹೇಳಿದ್ದರು. ಮುಂಬೈ ಎಲ್ಲಿದೆ ಎಂಬುದು ಸಹ ಗುಲಾಬಳಿಗೆ ತಿಳಿದಿರಲಿಲ್ಲ. ಬಾ ಮತ್ತು ಬಾಪೂ ಅವರನ್ನು ಅವಳು ನೋಡಿದ್ದಳು, ಹೀಗಾಗಿ ಅವರ ನೆನಪಿತ್ತು, ಆದರೆ ಅವಳಿಗೆ ಮಣಿಲಾಲ, ರಾಮದಾಸ ಅಥವಾ ದೇವದಾಸನ ಬಗ್ಗೆ ಏನೂ ತಿಳಿದಿರಲಿಲ್ಲ. ಅವಳ ಮನಸ್ಸಿನಲ್ಲಿ ಪತಿಯನ್ನು ಭೇಟಿಯಾಗುವ ಉತ್ಸಾಹವಿತ್ತು, ಅದರೊಂದಿಗೆ ಒಮ್ಮೆಲೆ ಅಪರಿಚಿತ ದೇಶದಲ್ಲಿ ಕಾಲಿಡುವಾಗ ಕಾಡುವ ಸಹಜ ಭಯವೂ ಸಹ ಇತ್ತು.

ಇನ್ನು ಮತ್ತೆ ರಾಜಕೋಟದ ಗಲ್ಲಿಗಳನ್ನು ನೋಡುವ ಅದೃಷ್ಟ ಮತ್ತು ತಂದೆ ಮನೆಯ ಅಂಗಳದ ಹೊಸ್ತಿಲ ಒಳಗೆ ಕಾಲಿಡುವ ಅವಕಾಶ ಎಂದು ಬರುವುದೋ ದೇವರೇ ಬಲ್ಲ! ಗಲ್ಲಿಯಲ್ಲಿದ್ದ ಬೇವಿನ ಮರದ ನೆರಳಿನಲ್ಲಿ ಮಂಚವನ್ನು ಹಾಕಿ, ಎಲ್ಲರೊಂದಿಗೆ ಬಿಡುವಿನಲ್ಲಿ ಕೂರುವ ಅವಕಾಶ ಎಂದು ಬರುವುದೋ...

ಆದರೆ ಮನಸ್ಸಿನ ಈ ಭಯ ಶೀಘ್ರವೇ ಶಮನಗೊಂಡಿತ್ತು. ಹೆಂಡತಿಯ ಆಗಮನದ ನಿರೀಕ್ಷೆಯಲ್ಲಿದ್ದ ಹರಿಲಾಲ ಹೆಂಡತಿಯನ್ನು ಸಂತಸದಿಂದ ಸ್ವಾಗತಿಸಿದ. ಇಷ್ಟು ದಿನಗಳು ವಿರಹದಲ್ಲಿ ಕಳೆದ ದಿನಗಳ ಲೆಕ್ಕ ಚುಕ್ತ ಮಾಡುವವನಂತೆ ಹರಿಲಾಲ ಗುಲಾಬಳ ಮೇಲೆ ಪ್ರೀತಿಯ ಮಳೆಗರೆದ.

ಬಾ ಸಹ ಸೊಸೆಗೆ ವಾತ್ಸಲ್ಯದ ಅಮೃತವನ್ನೇ ಉಣಬಡಿಸಿದರು. ರಾಜಕೋಟದಲ್ಲಿ ತನ್ನನ್ನು ಬೀಳ್ಕೊಡುವಾಗ ಹೊಸ್ತಿಲ ಬಳಿ ನಿಂತು ಕಣ್ಣೀರು ಸುರಿಸುತ್ತಿದ್ದ ತನ್ನ ತಾಯಿ ಮತ್ತು ಇಲ್ಲಿಯ ಆಶ್ರಮದ ಬಾಗಿಲ ಬಳಿ ನಿಂತ ತನ್ನನ್ನು ಹಾರ್ದಿಕವಾಗಿ ಸ್ವಾಗತಿಸುತ್ತಿರುವ ಬಾ –ಇವರಿಬ್ಬರೂ ತನಗೆ ಹೇಗೆ ಬೇರೆಯಾದಾರು! ಎಂದು ಗುಲಾಬಳಿಗೆ ಅನ್ನಿಸಿತು.

**(ಸಶೇಷ)**